5) ಶ್ರೀ ಕಂಪ್ಯೂಟರ್ಸ್ ಇವರಿಗೆ "ಸಾರ್ವಜನಿಕ" – ಖಾಸಗಿ ಸಹಭಾಗಿತ್ವದಲ್ಲಿ ಕಾರ್ಯನಿರ್ವಹಿಸಲು 5 1/2 ವರ್ಷಗಳ ಅವಧಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿರುತ್ತದೆ ;

ಈ) ಯೋಜನೆಯ ಪೂರ್ಣ 5 1/2 ವರ್ಷಗಳ ಕಾಲಾವಧಿಗೆ ರೂ 98 ಕೋಟಿಗಳ ಅಂದಾಜು ವೆಚ್ಚವನ್ನು ಒಳಗೊಂಡಂತೆ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿರುತ್ತದೆ ಸದರಿ ಯೋಜನೆಯ ಸಂಪೂರ್ಣ ವೆಚ್ಚವನ್ನು ತಾತ್ಕಾಲಿಕ ಪಡಿತರ ಕೂಪನ್, ಪಡಿತರ ಚೀಟಿ ಮತ್ತು ಆಹಾರ ಕೂಪನ್‌ಗಳು ಹಾಗೂ ಇತರೇ ಸೇವೆಗಳಿಗೆ ನಿಗಧಿಪಡಿಸಿರುವ ಶುಲ್ಕದಿಂದ ಭರಿಸಲಾಗುತ್ತಿದೆ ಈ ಯೋಜನೆಗೆ ಸರ್ಕಾರದ ಯಾವುದೇ ಅನುದಾನವನ್ನು ಒದಗಿಸಿರುವುದಿಲ್ಲ

109 (427) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳೆಷ್ಟು,

ಆ) ದೇವಸ್ಥಾನದ ನೌಕರಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗದವರಿಗೆ ಮೀಸಲಾತಿ ನೀಡಿದೆಯೇ (ದರ್ಜೆವಾರು ವಿವರವನ್ನು ನೀಡುವುದು) ,

ಇ) ಮೀಸಲಾತಿ ನೀಡುವಲ್ಲಿ ಅನ್ಯಾಯವಾಗಿದೆಯೆಂಬುದು ತಿಳಿದಿದ್ದರೂ ಮರುನೇಮಕಾತಿ ಸಂದರ್ಭದಲ್ಲೂ ಇಂತಹ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಈ) ವರ್ಗವಾರು ಮೀಸಲಾತಿ ನೀಡುವ ಸಂದರ್ಭದಲ್ಲಿ ಅನುಸರಿಸುತ್ತಿರುವ ಮಾನದಂಡವೇನು ?

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಾಲಯಗಳ ಸಂಖ್ಯೆ 34,194

ಆ) ಮುಜರಾಯಿ ದೇವಸ್ಥಾನಗಳ ನೌಕರರನ್ನು ಪ್ರಮುಖವಾಗಿ 2 ರೀತಿ ವರ್ಗೀಕರಿಸಲಾಗಿರುತ್ತದೆ

1 **ಒಳಾಂಗಣ ನೌಕರರು (ಆಗಮೀಕರು, ಅರ್ಚಕರು, ಉಪಾದಿವಂತರು, ಪರಿಚಾರಕರು)** – ಅರ್ಚಕ, ಆಗಮಿಕ, ಪರಿಚಾರಕ, ಉಪಾದಿವಂತ, ಪಾಚಕ, ಸ್ಥಾನಿಕ, ಜೋಯಿಸ, ಶ್ರೀಪಾದ, ಶ್ರೀಗಂಧ, ಕಟ್ಟಿಗೆ

ಮತ್ತು ಸೇವಾಕಾರಿಗಳು ಹಾಗೂ ಮಂತ್ರಗಳು, ವೇದಗಳು, ಪ್ರಬಂಧಗಳು, ಪುರಾಣಗಳ ಪರಣಕ್ಕಾಗಿ ನೇಮಕರಾದ ವ್ಯಕ್ತಿಗಳು ಮತ್ತು ಮುಖ್ಯವಾಗಿ ಪೂಜೆಗಳು ಮತ್ತು ರೂಢಿಗಳ ಆಚರಣೆಗಳನ್ನು ಮಾಡುವ ಅಥವಾ ಅದರ ಆಚರಣೆಗೆ ನೆರವು ನೀಡುವ ಕರ್ತವ್ಯಗಳನ್ನು ಹೊಂದಿರುವ ಜ್ಯೋತಿಷಿಗಳು ದೇವಸ್ಥಾನದ ಒಳಾಂಗಣ ನೌಕರರಾಗಿರುತ್ತಾರೆ

2 **ಹೊರಾಂಗಣ ನೌಕರರು (ಪಾರುಪತ್ತೇದಾರರು, ಅಡಿಗೆಯವರು, ರಂಗವಲ್ಲಿ, ವಾದ್ಯದವರು, ಕಸಗುಡಿಸುವವರು, ಕಾವಲುಗಾರರು, ಇತ್ಯಾದಿ)** – ರಾಜ್ಯ ಸರ್ಕಾರದಿಂದ ಪ್ರತಿನಿಯೋಜಿತರಾದ ಸರ್ಕಾರಿ ನೌಕರರನ್ನು ಹೊರತುಪಡಿಸಿ, ದೇವಸ್ಥಾನದಲ್ಲಿನ ವಿವಿಧ ಕರ್ತವ್ಯಗಳನ್ನು ನಿರ್ವಹಿಸಲು ನಿಯೋಜಿತರಾಗಿರುವ ಪಾರುಪತ್ತೇಗಾರ, ಪೇಷ್ಕಾರ್, ಬಿಲ್ ಸಂಗ್ರಾಹಕ, ಗುಮಾಸ್ತ, ಬೆರಳಚ್ಚುಗಾರ ಮತ್ತು ಇತರ ವ್ಯಕ್ತಿಗಳು ದೇವಸ್ಥಾನದ ಹೊರಾಂಗಣ ನೌಕರರಾಗಿರುತ್ತಾರೆ ಸರ್ಕಾರದ ಸುತ್ತೋಲೆ ಸಂಖ್ಯೆ ಕಂಇ 90/ಎಂಇಟಿ 96, ದಿನಾಂಕ 28–2–87ರ ಸುತ್ತೋಲೆಯಲ್ಲಿ ವಂಶಪಾರಂಪರ್ಯ ಆಧಾರದ ಮೇಲೆ ತುಂಬಬೇಕಾದ ಅರ್ಚಕರ ಹುದ್ದೆಗಳನ್ನು ಹೊರತುಪಡಿಸಿ, ಉಳಿದ ಅನುವಂಶಿಕ ಹುದ್ದೆಗಳಿಗೆ ನೇಮಕ ಮಾಡುವಾಗ ವಿದ್ಯಾರ್ಹತೆ ಪಡೆದ ಎಲ್ಲಾ ಕೋಮಿನವರಿಗೂ ಸಮಾನ ಅವಕಾಶ ನೀಡಬೇಕೆಂದು ನಿರ್ದೇಶಿಸಿರುತ್ತದೆ ಈ ಪ್ರಕಾರ ದೇವಾಲಯದ ಒಳಾಂಗಣ ಮತ್ತು ಹೊರಾಂಗಣ ಹುದ್ದೆಗಳಲ್ಲಿ ಅನುವಂಶಿಕ ಹುದ್ದೆಗಳನ್ನು ಹೊರತುಪಡಿಸಿ ಉಳಿದ ಹುದ್ದೆಗಳಿಗೆ ಆಯಾ ಹುದ್ದೆಗಳಿಗೆ ಅನುಗುಣವಾದ ವಿದ್ಯಾರ್ಹತೆ ಪಡೆದ ಎಲ್ಲಾ ಕೋಮಿನವರನ್ನು ನೇಮಕಾತಿಗೆ ಪರಿಗಣಿಸಲಾಗುತ್ತಿದೆ

ದೇವಾಲಯದ ಸಿಬ್ಬಂದಿಯ ವೇತನವನ್ನು ಆಯಾಯ ದೇವಾಲಯದ ನಿಧಿಯಿಂದ ಭರಿಸಬೇಕಾಗಿದ್ದು, ನೌಕರರ ವೇತನವನ್ನು ಆಯಾಯ ದೇವಾಲಯದ ಆರ್ಥಿಕ ಸ್ಥಿತಿ–ಗತಿಗನುಗುಣವಾಗಿ ನಿರ್ಧರಿಸಬೇಕಾಗಿರುವುದರಿಂದ ಕನಿಷ್ಠ ವೇತನ ಪಡೆಯುವ ಹುದ್ದೆಗಳಿಗೆ ಸ್ಥಳೀಯರಲ್ಲದೇ ಬೇರೆ ಅಭ್ಯರ್ಥಿಗಳು ಮುಂದೆ ಬರುವ ಸಾಧ್ಯತೆ ತೀರ ಕಡಿಮೆ ಇದ್ದು, ಇಂತಹ ಸಂದರ್ಭಗಳಲ್ಲಿ ಮೀಸಲಾತಿ ಪರಿಗಣಿಸುವುದು ಕಷ್ಟಸಾಧ್ಯವಾಗುತ್ತಿದ್ದರೂ, ಅನುವಂಶಿಕ ವಲ್ಲದ ಒಳಾಂಗಣ ಮತ್ತು ಹೊರಾಂಗಣ ಹುದ್ದೆಗಳಿಗೆ ಪರಿಶಿಷ್ಟ ವರ್ಗದವರನ್ನು ನೇಮಕ ಮಾಡಲು ಕ್ರಮ ಜರುಗಿಸಲಾಗುತ್ತಿದೆ

ಅರ್ಚಕರಾಗಿ ನೇಮಕಾತಿ ಹೊಂದುವವರು ಆಯಾ ದೇವಾಲಯದ ಸಂಪ್ರದಾಯ/ಪದ್ಧತಿಗೆ ಅನುಗುಣವಾಗಿ ನಿಗಧಿಪಡಿಸಿದ ಆಗಮ–ಶಿಕ್ಷಣ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾಗಿರುವುದು ಕಡ್ಡಾಯವಾಗಿದೆ ಅರ್ಚಕರ ವೃತ್ತಿಗೆ ಸಂಬಂಧಿಸಿದಂತೆ, ಸರ್ಕಾರದ ವತಿಯಿಂದ ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು (ಆಗಮ ವಿಭಾಗ) ಮತ್ತು ಸರ್ಕಾರಿ ಸಂಸ್ಕೃತ ಕಾಲೇಜು ಮೇಲುಕೋಟೆ ಇಲ್ಲಿ ವಿದ್ಯಾರ್ಥಿಗಳಿಗೆ ಆಗಮ ಶಿಕ್ಷಣವನ್ನು ಬೋಧಿಸಲಾಗುತ್ತಿದೆ ಉಳಿದಂತೆ ರಾಜ್ಯದಲ್ಲಿ 27 ಖಾಸಗಿ ಸಂಸ್ಥೆಗಳಿಗೆ ಆಗಮ ಶಿಕ್ಷಣ ಭೋದಿಸಲು ಇಲಾಖೆಯಿಂದ ಅನುಮೋದನೆ ನೀಡಲಾಗಿದೆ ಈ ಪಾಠ ಶಾಲೆಗಳಲ್ಲಿ ಆಗಮ ವಿದ್ಯಾಭ್ಯಾಸ ಮಾಡಲು ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಸಹ - ಅವಕಾಶವಿದ್ದು, ಸಂಸ್ಥೆಗೆ ಪಾವತಿಸುವ ಶುಲ್ಕದಲ್ಲಿ ವಿನಾಯಿತಿ ನೀಡಲಾಗಿದೆ ಶಿಷ್ಯ ವೇತನ ಹಾಗೂ ವಿದ್ಯಾರ್ಥಿನಿಲಯದ ಸೌಲಭ್ಯವನ್ನು ಕಲ್ಪಿಸಲಾಗಿದೆ ಆಸಕ್ತರಾದ ಎಲ್ಲಾ ಕೋಮಿನ ವಿದ್ಯಾರ್ಥಿಗಳು ಈ ಆಗಮ ಶಾಲೆಗಳಿಂದ ಆಗಮ ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸಲಾಗಿದೆ

ಪ್ರಸ್ತುತ ದೇವಾಲಯದ ಒಳಾಂಗಣ ಮತ್ತು ಹೊರಾಂಗಣ ನೌಕರರ ನೇಮಕಾತಿಗೆ ಸಂಬಂಧಿಸಿದಂತೆ ಮೀಸಲಾತಿಯನ್ನು ಕಲ್ಪಿಸಿಲ್ಲವಾದ್ದರಿಂದ ಅನುವಂಶಿಕ ಹುದ್ದೆಗಳ ನೇಮಕಾತಿಯಲ್ಲಿ ಕೂಡ ಮೀಸಲಾತಿ ಕಲ್ಪಿಸುವ ಬಗ್ಗೆ ಪರಿಶೀಲಿಸಿ, ನಿರ್ಧಾರ ಕೈಗೊಳ್ಳಲಾಗುವುದು

ಇ) 'ಆ' ಗೆ ನೀಡಿರುವ ಉತ್ತರದ ಕಾರಣ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಈ) 'ಆ" ಗೆ ನೀಡಿದ ಉತ್ತರದಿಂದಕ್ಕಾಗಿ ಉದ್ಭವಿಸುವುದಿಲ್ಲ

110 (429) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಬಡವರಿಗೆ ನೀಡುವ ಬಿಪಿಎಲ್ ಪಡಿತರ ಕಾರ್ಡ್ ವಿತರಣೆ ಯಾವಾಗ ಪೂರ್ಣಗೊಳಿಸಲಾಗುವುದು ,

ಆ) ವಿಳಂಬಕ್ಕೆ ಕಾರಣಗಳೇನು ,

ಇ) ಶೇಕಡವಾರು ಕಡ್ಡಾಯ ಮಾಡಿದಲ್ಲಿ ನೈಜ ಫಲಾನುಭವಿಗಳಿಗೆ ಅನ್ಯಾಯವಾಗುವುದು ತಿಳಿದಿದೆಯೇ ,